ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಸಿ5[1]ಬೋ.ನೌ.ವರ್ಗ:04:2012-13 ದಿನಾಂಕ:11ನೇ ಮೇ 2012

### : ಜ್ಞಾಪನ :

**ವಿಷಯ**: 2012-13ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕೇತರ ಅಧಿಕಾರಿ / ನೌಕರರ ವರ್ಗಾವಣೆ ಬಗ್ಗೆ.

**ಉಲ್ಲೇಖ**: ಸರ್ಕಾರದ ಆದೇಶ ಸಂ:ಇಡಿ:ಡಿಪಿಎಆರ್:04:ಎಸ್‌ಟಿಆರ್:2001, ದಿ:22.11.2001.

2] ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:12:ಸೇನೌವ:2012, ದಿನಾಂಕ:28.04.2012.

3] ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ:-30/04/2012

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಕಛೇರಿಯ ದಿನಾಂಕ:-30/04/2012ರಂದು 2012-13ನೇ ಸಾಲಿನ ಬೋದಕೇತರ ನೌಕರರ ವರ್ಗಾವಣೆ ಬಗ್ಗೆ ಸೂಚನೆಗಳನ್ನು ನೀಡಲಾಗಿತ್ತು. ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಬೆಂಗಳೂರು ಆಯುಕ್ತಾಲಯದ 17 ಶೈಕ್ಷಣಿಕ ಜಿಲ್ಲೆಗಳಲ್ಲಿನ ಬೋದಕೇತರ ವರ್ಗದ 'ಸಿ ಮತ್ತು ಡಿ' ದರ್ಜೆ ನೌಕರರ ವರ್ಗಾವಣೆಗಳನ್ನು ವೃಂದ ನಿರ್ವಾಹಣ ಪ್ರಾಧಿಕಾರದ (ಸಿ.ಎಂ.ಎ) ಮುಂದೆ ಮಂಡಿಸಿ ದಿನಾಂಕ:-16/05/2012ರ ಒಳಗಾಗಿ ಅನುಷ್ಠಾನಗೊಳಿಸುವಂತೆ ಮಾನ್ಯ ಆಯುಕ್ತರು ನಿರ್ದೇಶನ ನೀಡಿರುತ್ತಾರೆ

ಈ ಹಿನ್ನೆಲೆಯಲ್ಲಿ ಜಿಲ್ಲಾ ಮಟ್ಟದೊಳಗಿನ ವರ್ಗಾವಣೆಗಳನ್ನು ಉಲ್ಲೇಖ(1)ರ ದಿನಾಂಕ:-22/11/2001ರ ಮಾರ್ಗಸೂಚಿಯನ್ನು ಗಮನದಲ್ಲಿಟ್ಟುಕೊಂಡು ಉಲ್ಲೇಖ(2)ರ ಸರ್ಕಾರಿ ಆದೇಶದಲ್ಲಿ ಬರುವಂತಹ ಸೂಚನೆಗಳನ್ನು ಅನುಸರಿಸಿ ದಿನಾಂಕ:-16/05/2012ರ ಒಳಗಾಗಿ ವರ್ಗಾವಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ತಿಳಿಸಿದೆ.

ದಿನಾಂಕ:-17/05/2012 ರಂದು, ಅನುಷ್ಠಾನಗೊಳಿಸಿರುವ ವರ್ಗಾವಣೆಯ ಆದೇಶದ ಪ್ರತಿ ಹಾಗೂ ನಂತರದ ಬೋದಕೇತರ ಖಾಲಿ ಹುದ್ದೆಗಳ ಮಾಹಿತಿಯನ್ನು ಈ ಕಛೇರಿಗೆ ಓರ್ವ ವಿಷಯನಿರ್ವಾಹಕರೊಂದಿಗೆ ಖುದ್ದು ಕಳುಹಿಸಿ ಕೊಡುವಂತೆ ತಿಳಿಸಿದೆ.

ಬೆಂಗಳೂರು ನಗರದ ಉತ್ತರ ಮತ್ತು ದಕ್ಷಿಣ ಹಾಗೂ ಆಯುಕ್ತರ ಘಟಕ ವ್ಯಾಪ್ತಿಯ 'ಸಿ'ಮತ್ತು 'ಡಿ' ದರ್ಜೆ ನೌಕರರ ವರ್ಗಾವಣೆಗಳನ್ನು ಈ ಕಛೇರಿಯಲ್ಲೇ ನಿರ್ವಹಿಸಲಿರುವುದರಿಂದ ವರ್ಗಾವಣೆ ಅರ್ಜಿಗಳು ಇನ್ನು ಇದ್ದಲ್ಲಿ ದಿನಾಂಕ:-11/05/2012ರ ಸಂಜೆ 05-30ರ ಒಳಗಾಗಿ ಕಳುಹಿಸುವಂತೆ ತಿಳಿಸಿದೆ. ಆ ನಂತರದಲ್ಲಿ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

[ವಿ.ಜಿ.ದಿವಾಕರ್]

ಅಪರ ಆಯುಕ್ತರು [ಆಡಳಿತ]

**ಇವರಿಗೆ:**

1. ನಿರ್ದೇಶಕರು, ಕ.ಪ್ರೌ.ಶಿ.ಪ.ಮಂಡಳಿ/ಡಿ.ಎಸ್.ಇ.ಆರ್.ಟಿ/ಪಠ್ಯಪುಸ್ತಕ/ಉರ್ದು ಮತ್ತು ಭಾಷಾ ಅಲ್ಪ ಸಂಖ್ಯಾತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು SSA| SWF/TDF| MMS
2. ಕಾರ್ಯದರ್ಶಿಗಳು ಹಗೂ ಪದನಿಮಿತ್ತ ಸಹನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮೈಸುರು ವಿಭಾಗೀಯ ಕಛೇರಿ, ಮೈಸೂರು ವಿಭಾಗ, ಮೈಸೂರು ಜಿಲ್ಲೆ.
3. ಪ್ರಾಂಶುಪಾಲರು, ಸಿ.ಟಿ.ಇ., ಮೈಸೂರು, ಮಂಗಳೂರು ಮತ್ತು ಚಿತ್ರದುರ್ಗ.
4. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿನ ಎಲ್ಲಾ ಉಪನಿರ್ದೇಶಕರು [ಆಡಳಿತ]ಇವರಿಗೆ.
5. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿನ ಎಲ್ಲಾ ಉಪನಿರ್ದೇಶಕರು [ಅಭಿವೃದ್ಧಿ]ಇವರಿಗೆ.
6. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ.
7. ಕಛೇರಿ ಪ್ರತಿ.

. E:\TRN-2012-13\97-2012 [ವರ್ಗಾವಣೆ-2012].doc